1

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ, ಇವರು ನಿಯಮ-72 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ

**ವಿಷಯ:-** ಅಂಕಿ ಅಂಶಗಳ ಪ್ರಕಾರ 2018 ರಲ್ಲಿ ದೇಶಾದ್ಯಂತ ಸುಮಾರು 2025 ಮಿಲಿಯನ್ ಜನರು ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಅಂದಾಜು 20 ರಿಂದ 25 ಸಾವಿರ ಜನರು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಕ್ಯಾನ್ಸರ್‌ನಿಂದಾಗಿ ದೇಶದಲ್ಲಿ ಪ್ರತಿ ವರ್ಷ ಅಂದಾಜು 8 ಲಕ್ಷ ಜನರು ಸಾವಿಗಿಡಾಗಿದ್ದಾರೆ.

ಆದರೆ ಇತ್ತೀಚೆಗೆ ಈ ಕ್ಯಾನ್ಸರ್ ರೋಗದ ಪತ್ತೆ ಹಚ್ಚುವಿಕೆ ಮತ್ತು ಸೂಕ್ತ ಚಿಕಿತ್ಸೆಗಾಗಿ ಪ್ರಪಂಚದಲ್ಲಿ ಅಧುನಿಕ ಪ್ರೋಟಾನ್ ಯಂತ್ರದ ಮೂಲಕ ಟ್ರೀಟ್‌ಮೆಂಟ್ ನೀಡುವಂತಹ ಪದ್ದತಿಯನ್ನು ಪ್ರಾರಂಭಿಸಲಾಗಿದ್ದು, ಈ ಅಧುನಿಕ ಯಂತ್ರವನ್ನು ಒದಗಿಸಿ ಕೊಟ್ಟರೆ ಅತ್ಯಂತ ಬಡವರಿಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆಯ ಲಾಭ ದೊರೆಯುತ್ತದೆ ಎನ್ನುವ ವಿಷಯದ ಕುರಿತು.

******

ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯು ಗುಣಮಟ್ಟದ ಕ್ಯಾನ್ಸರ್ ಆರೈಕೆ ಸೇವೆಗಳು, ಶಿಕ್ಷಣ ಮತ್ತು ಸಂಶೋದನೆಗಳನ್ನು ಒದಗಿಸುವ ಮಾನ್ಯತೆ ಪಡೆದ ಚಿಕಿತ್ಸಾ ಕೇಂದ್ರವಾಗಿದೆ. ಕ್ಯಾನ್ಸರ್ ರೋಗಕ್ಕೆ ಪ್ರೋಟಾನ್ ಯಂತ್ರದ ಮೂಲಕ ಚಿಕಿತ್ಸೆ ನೀಡುವ ವಿಧಾನವು ಆದುನಿಕ ಅವಿಷ್ಕಾರವಾಗಿದ್ದು ಇದು ಕ್ಯಾನ್ಸರ್ ಗಡ್ಡೆಯ ಸುತ್ತಮುತ್ತಲಿನ ಸಾಮಾನ್ಯ ಜೀವಕೋಶಗಳಿಗೆ ಅನಗತ್ಯ ವಿಕಿರಣದಿಂದ ತೊಂದರೆಯಾಗದಂತೆ ಕ್ಯಾನ್ಸರ್ ಗಡ್ಡೆ ನಿಯಂತ್ರಿಸಲು ಅನುಕೂಲವಾಗುತ್ತದೆ ಮತ್ತು ಗಡ್ಡೆಯ ಬಳಿ ಇರುವ ಪ್ರಮುಖ ಅಂಗಗಳು ಹಾನಿಗೊಳ್ಳದಂತೆ ರಕ್ಷಿಸುತ್ತದೆ.

ಪೂರ್ಣ ಪ್ರಮಾಣದ ಪ್ರೋಟಾನ್ ಥೆರಪಿ ಸೌಲಭ್ಯವನ್ನು ಸ್ಥಾಪಿಸಲು ಅಂದಾಜು ರೂ.500 ಕೋಟಿಗಳ ವೆಚ್ಚವುಂಟಾಗುತ್ತದೆ. ಈ ಚಿಕಿತ್ಸೆ ಒದಗಿಸಲು 200ಟನ್ನುಗಳಿಗಿಂತ ಹೆಚ್ಚು ತೂಕವಿರುವ ಸಿಂಕ್ರೋಟ್ರಾನ್ ಯಂತ್ರವನ್ನು ಸ್ಥಾಪಿಸಲು ಸಾಕಷ್ಟು ವಿಶಾಲವಾದ ಸ್ಥಳವಕಾಶ ಬೇಕಾಗುತ್ತದೆ. ಪ್ರಸ್ತುತ ಪ್ರೋಟಾನ್ ಚಿಕಿತ್ಸೆಗೆ ಪ್ರತಿ ರೋಗಿಗೆ ಸುಮಾರು 20-25ಲಕ್ಷಗಳು ಖರ್ಚಾಗಬಹುದು.

ಪ್ರಸ್ತುತ ಭಾರತದಲ್ಲಿ ಎರಡು ಸರ್ಕಾರಿ ಕೇಂದ್ರಗಳಲ್ಲಿ ಮಾತ್ರ ಪ್ರೋಟಾನ್ ಚಿಕಿತ್ಸಾ ಸೌಲಭ್ಯವನ್ನು ಸ್ಥಾಪಿಸಲು ಯೋಜಿಸುತ್ತಿವೆ.

1. ಮುಂಬೈನ ಟಾಟಾ ಮೆಮೋರಿಯಲ್ ಸೆಂಟರ್
2. ಅಖಿಲ ಭಾರತೀಯ ವೈದ್ಯಕೀಯ ಸಂಸ್ಥೆ, ಜವಹರಲಾಲ್ ನೆಹರು ಸ್ನಾತಕೋತ್ತರ ವೈದ್ಯಕೀಯ ಸಂಸ್ಥೆ ಪಾಂಡಿಚೆರಿ.

ಇನ್ನುಳಿದಂತೆ ಭಾರತದಲ್ಲಿ ಯಾವುದೇ ಸರ್ಕಾರಿ ಕೇಂದ್ರಗಳಲ್ಲಿ ಈ ಸೌಲಭ್ಯಗಳು ಇರುವುದಿಲ್ಲ ಪ್ರಸ್ತುತ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯಲ್ಲಿ ಆದುನಿಕ ಪ್ರೋಟಾನ್ ಯಂತ್ರವನ್ನು ಅಳವಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಈ ಚಿಕಿತ್ಸೆ ವಿಧಾನದಿಂದ ಕ್ಯಾನ್ಸರ್ ರೋಗಿಗಳಿಗೆ ಅತ್ಯಂತ ಉಪಯುಕ್ತವಾಗಲಿದ್ದು ಇದಕ್ಕೆ ಹೆಚ್ಚಿನ ವೆಚ್ಚವಾಗುವ ಹಿನ್ನಲೆಯಲ್ಲಿ ಹಣಕಾಸಿನ ನೆರವನ್ನು ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು, ಅನುದಾನ ಲಭ್ಯಕ್ಕೆ ಅನುಗುಣವಾಗಿ ಪ್ರೋಟಾನ್ ಯಂತ್ರದ ಸೌಲಭ್ಯವನ್ನು ಅಳವಡಿಸಿಕೊಳ್ಳುವ ಬಗ್ಗೆ ಕ್ರಮವಹಿಸಲಾಗುವುದು.

(ಡಾ॥ ಕೆ. ಸುಧಾಕರ್)
ವೈದ್ಯಕೀಯ ಶಿಕ್ಷಣ ಸಚಿವರು

ಸಂಖ್ಯೆ ಎಂ.ಇ.ಡಿ./27/ಕೆ.ಯು.ಎಂ./2020